ಶ್ರೀ ವೀರಕುಮಾರ್ ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ಈ ಗುಡಗೂರಿನಲ್ಲಿ ಜೂನ್ 2001 ರವರೆಗೆ ಎಂದು ನಾವು ಈಗಾಗಲೇ ಡೇಟ್ ಕೊಟ್ಟಿದ್ದೇವೆ. ಈ ಸಬ್-ಸ್ಟೇಷನ್‌ಗಳನ್ನು ಸ್ಥಾಪನೆ ಮಾಡುವುದಕ್ಕೆ ಕನಿಷ್ಟ 6 ತಿಂಗಳಾದರೂ ಬೇಕು. ಈ 6 ತಿಂಗಳಿಗಿಂತ ಹೆಚ್ಚಿನ ಟೈಮ್ ತೆಗೆದು ಕೊಂಡಿದ್ದೇವೆ. ಏಕೆಂದರೆ, ಮಳೆಗಾಲದಲ್ಲಿ ಕೆಲವೊಂದು ಸಮಸ್ಯೆಗಳು ಬರುತ್ತವೆ. ಇದನ್ನು ಸಾಕಷ್ಟು ಬೇಗನೆ ಮಾಡುವ ಸಲುವಾಗಿ ನಾನು ಪ್ರಯತ್ನ ಮಾಡುತ್ತೇನೆ. ಆಮೇಲೆ, ಮುದೇನೂರು ಮತ್ತು ಕುಪ್ಪೇಲೂರು ಗ್ರಾಮಗಳಲ್ಲಿ ತಾವು ಭೂಮಿ ಕೊಟ್ಟರೆ, ಒಂದು ತಿಂಗಳಿನಲ್ಲಿ ಕೆಲಸ ಪ್ರಾರಂಭ ಮಾಡಿಸುತ್ತೇನೆ.

ಶ್ರೀ ಕೆ.ಬಿ. ಕೋಳಿವಾಡ್ : ನೀವು ಗುಡಗೂರಿನಲ್ಲಿಯೇ ಇನ್ನೂ ಕೆಲಸವನ್ನು ಪ್ರಾರಂಭ ಮಾಡಿಲ್ಲ. ಇದಕ್ಕೆ ಈಗಾಗಲೇ ಹಣ ಮಂಜೂರಾತಿಗಾಗಿ, ಭೂಮಿ ಕೊಟ್ಟು 6-6 ತಿಂಗಳಾಗಿದೆ. ಅಲ್ಲಿ ಕಾರ್ಯವನ್ನೇ ಪ್ರಾರಂಭ ಮಾಡಿಲ್ಲ. ಅದಕ್ಕೆ ಆದಷ್ಟು ಬೇಗ 3-3 ತಿಂಗಳಲ್ಲಿ ಮಾಡಿ ಮುಗಿಸಿದರೆ, ಕರೆಂಟ್ ಸರಬರಾಜಾಗುತ್ತದೆ. ನಮ್ಮ ಸಮಸ್ಯೆಗಳೂ ನಿವಾರಣೆಯಾಗುತ್ತವೆ. ನೀವು ಅಧಿಕಾರಿಗಳಿಗೆ ಒತ್ತಾಯ ಮಾಡಿ, ಮೂರು ತಿಂಗಳಲ್ಲಿ ಈ ಕೆಲಸ ಮುಗಿಸುವುದಕ್ಕೆ, ಕೆಲಸ ಪ್ರಾರಂಭ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ವೀರಕುಮಾರ್ ಪಾಟೀಲ್ : ಕೆಲಸ ಪ್ರಾರಂಭ ಮಾಡಿ, ಸಾಕಷ್ಟು ಬೇಗನೆ ಮಾಡುವ ಸಲುವಾಗಿ ನಾನು ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು : ಮುಂದಿನ ಪ್ರಶ್ನೆ ಮಾನ್ಯ ಉಮೇಶ್ ಕತ್ತಿಯವರದು ಆ ಪ್ರಶ್ನೆಗೆ ಇನ್ನೂ ಉತ್ತರ ಬಂದಿಲ್ಲ. ಇದನ್ನು ಹೆಲ್ಡ್ ಓವರ್ ಮಾಡಲಾಗಿದೆ.

## ಶನಿವಾರ ಸಂತೆಯಲ್ಲಿ 66 ಕೆ.ವಿ. ಪವರ್ ಸ್ಟೇಷನ್

459 - ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕಿನ ಶನಿವಾರ ಸಂತೆಯಲ್ಲಿ 66 ಕೆ.ವಿ. ಪವರ್ ಸ್ಟೇಷನ್ ಮಂಜೂರಾಗಿದ್ದು ಎಂದು?*

ಆ) *ಕಾಮಗಾರಿ ಪ್ರಾರಂಭಿಸಲಾಗಿದೆಯೇ? ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?*

ಇ) *ಎಂದಿನಿಂದ ಕಾಮಗಾರಿ ಪ್ರಾರಂಭಿಸಲಾಗುವುದು, ಕಾಮಗಾರಿಯನ್ನು ಎಂದು ಪೂರ್ಣಗೊಳಿಸಲು ಯೋಜಿಸಲಾಗಿದೆ?*

ಶ್ರೀ ವೀರಕುಮಾರ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲ್ಲೂಕಿನ ಶನಿವಾರ ಸಂತೆಯಲ್ಲಿ ಒಂದು 66:11 ಕೆ.ವಿ. ವಿದ್ಯುತ್ ಸಬ್-ಸ್ಟೇಷನ್‌ನ್ನು ಸ್ಥಾಪನೆ ಮಾಡಲು ನಿಗಮದ ತಾಂತ್ರಿಕ ಸಮಿತಿಯು ಜನವರಿ 99ರಲ್ಲಿ ಅನುಮೋದನೆ ನೀಡಿದ್ದು, ದಿನಾಂಕ: 4.1.2000 ರಂದು ಸದರೀ ಕಾಮಗಾರಿಯನ್ನು

ಕೈಗೊಳ್ಳುವ ಬಗ್ಗೆ ಆಡಳಿತಾತ್ಮಕ ಅನುಮೋದನೆಯನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ನೀಡಿರುತ್ತದೆ.

ಆ) ಈ ಕಾಮಗಾರಿಯನ್ನು ಇದುವರೆಗೆ ಪ್ರಾರಂಭಿಸಿರುವುದಿಲ್ಲ. ಪ್ರಾರಂಭಿಸದೇ ಇರಲು ಮುಖ್ಯ ಕಾರಣಗಳು :

1. ಸದರೀ ವಿದ್ಯುತ್ ಸಬ್-ಸ್ಟೇಷನ್‌ನ್ನು ನಿರ್ಮಾಣ ಮಾಡಲು ಬೇಕಾಗಿರುವ ಭೂಮಿಯನ್ನು ಅರಣ್ಯ ಇಲಾಖೆಯು ಕ.ವಿ.ಪ್ರ. ನಿ.ನಿ.ಯ ವಶಕ್ಕೆ ನೀಡಬೇಕಾಗಿರುತ್ತದೆ. ಭೂ ಸ್ವಾಧೀನವಾದ ನಂತರ ನಿರ್ಮಾಣ ಕಾರ್ಯಗಳ ಬಗ್ಗೆ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗುವುದು.
2. ಕ.ವಿ.ಪ್ರ.ನಿ.ನಿ.ಯು ಎದುರಿಸುತ್ತಿರುವ ಕಠಿಣ ಆರ್ಥಿಕ ಮುಗ್ಗಟ್ಟಿನ ಪರಿಸ್ಥಿತಿಯಲ್ಲಿ ಕ.ವಿ.ಪ್ರ.ನಿ.ನಿ.ಯು ತನ್ನದೇ ಆದ ಆರ್ಥಿಕ ಸಂಪನ್ಮೂಲಗಳ ಮೂಲಕವೇ ನಿರ್ಮಾಣ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯವಿಲ್ಲ. ಹೀಗಾಗಿ ಗ್ರಾಮೀಣ ವಿದ್ಯುದ್ದೀಕರಣ ನಿಗಮದಿಂದ ಸಾಲ ಸೌಲಭ್ಯವನ್ನು ಪಡೆಯುವುದು ಅನಿವಾರ್ಯವಾಗಿರುತ್ತದೆ. ಗ್ರಾಮೀಣ ವಿದ್ಯುದ್ದೀಕರಣ ನಿಗಮವು ಸದರೀ ಕಾಮಗಾರಿಗಾಗಿ ಫೆಬ್ರವರಿ 2000ದಲ್ಲಿ ಸಾಲ ಸೌಲಭ್ಯವನ್ನು ಮಂಜೂರು ಮಾಡಿರುತ್ತದೆ.

ಇ) ಅರಣ್ಯ ಇಲಾಖೆಯು ಕ.ವಿ.ಪ್ರ.ನಿ.ನಿ.ಯ ವಶಕ್ಕೆ ಭೂಮಿಯನ್ನು ಹಸ್ತಾಂತರಗೊಳಿಸಿದ ನಂತರ ಕಾಮಗಾರಿಯನ್ನು ಪ್ರಾರಂಭಿಸುವ ಬಗ್ಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ. ಅಲ್ಲದೇ, ಕ.ವಿ.ಪ್ರ.ನಿ.ನಿ.ಯು ವಿದ್ಯುತ್ ಸಬ್-ಸ್ಟೇಷನ್‌ಗಳು ಮತ್ತು ವಿದ್ಯುತ್ ಪ್ರಸರಣ ಮಾರ್ಗಗಳ ನಿರ್ಮಾಣ ಕಾರ್ಯಗಳನ್ನು ಟರ್ನ್ ಕೀ ಆಧಾರದ ಮೇಲೆಯೇ ಕೈಗೊಳ್ಳಲು ತೀರ್ಮಾನಿಸಿರುವುದರಿಂದ, ಸದರೀ ವಿದ್ಯುತ್ ಸಬ್-ಸ್ಟೇಷನ್ನಿನ ನಿರ್ಮಾಣ ಕಾರ್ಯವನ್ನು ಸಹಾ ಟರ್ನ್ ಕೀ ಆಧಾರದ ಮೇಲೆಯೇ ನಿರ್ವಹಿಸಬೇಕಾಗಿರುತ್ತದೆ. ಟರ್ನ್ ಕೀ ಆಧಾರದ ಮೇಲೆ ಗುತ್ತಿಗೆದಾರರನ್ನು ನೇಮಿಸಿ, ಕಾಮಗಾರಿಯನ್ನು ಪ್ರಾರಂಭಿಸಿದ ನಂತರ, ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲು ಕನಿಷ್ಟ 15 ತಿಂಗಳ ಕಾಲವಕಾಶ ಬೇಕಾಗುತ್ತದೆ. ಅಲ್ಲದೇ, ವಿದ್ಯುತ್ ಪ್ರಸರಣ ಮಾರ್ಗವನ್ನು ನಿರ್ಮಾಣ ಮಾಡಲು ಶಾಸನಬದ್ಧವಾಗಿ ಬೇಕಾಗಿರುವ ಅನುಮೋದನೆಗಳಾದಂತ ಅರಣ್ಯ ಇಲಾಖೆಯಿಂದ ಅನುಮೋದನೆ (ಫಾರೆಸ್ಟ್ ಕ್ಲಿಯೆರೆನ್ಸ್) ಮತ್ತು ಪಿ.ಟಿ.ಸಿ.ಸಿ.ಯಿಂದ ಅನುಮೋದನೆ ಇವುಗಳನ್ನು ಸಹ ಪಡೆಯುವುದು ಅವಶ್ಯಕವಾಗಿರುತ್ತದೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಸನ್ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಫಾರೆಸ್ಟ್ ಡಿಪಾರ್ಟ್‌ಮೆಂಟಿನಿಂದ ಇನ್ನೂ ಜಾಗವನ್ನು ಪಡೆದುಕೊಂಡಿಲ್ಲವೆಂಬ ಉತ್ತರವನ್ನು ಕೊಟ್ಟಿದ್ದಾರೆ. ಅರಣ್ಯ ಇಲಾಖೆಯಿಂದ ಕೆ.ಇ.ಬಿ.ಗೆ ಜಾಗವನ್ನು ತೆಗೆದುಕೊಳ್ಳುವುದಕ್ಕೆ ಇಷ್ಟು ಸಮಯ ಬೇಕಾಗಿದೆ. ಕಳೆದ ಸಾರಿ ನಾನು ಪ್ರಶ್ನೆ ಕೇಳಿದಾಗಲೂ ಕೂಡ ಅವರ ಉತ್ತರದಲ್ಲಿ ಆಡಳಿತ ಮಂಜೂರಾತಿಗಾಗಿ 4-1-2000 ಇಸವಿಯಲ್ಲಿ ಅನುಮೋದನೆ ಕೊಡಲಾಗಿದೆ ಎಂದು ಕೊಟ್ಟಿದ್ದಾರೆ. ಎರಡನೆಯದಾಗಿ ಯಾವಾಗ ಪ್ರಾರಂಭ ಮಾಡುತ್ತೀರಿ ಎಂಬ ಪ್ರಶ್ನೆಗೆ, ಫೆಬ್ರವರಿ 2000ನೇ ಇಸವಿಯಲ್ಲಿ ಸಾಲದ

ಲಭ್ಯತೆಯಲ್ಲಿ ಮಂಜೂರಾತಿ ಮಾಡಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಇದಕ್ಕೆ ಎಷ್ಟು ಹಣ ಮಂಜೂರಾತಿ ಮಾಡಿದ್ದೀರಿ? ಯಾವ ಸ್ಕೀಮಿನಲ್ಲಿ ಹಣವನ್ನು ತೆಗೆದುಕೊಂಡಿದ್ದೀರಿ? ಯಾವಾಗ ಕೆಲಸ ಶುರು ಮಾಡುತ್ತೀರಿ? ಇದಕ್ಕೆ ನಿರ್ದಿಷ್ಟವಾದ ಉತ್ತರವನ್ನು ಕೊಡಬೇಕೆಂದು ನಾನು ಅಪೇಕ್ಷೆ ಪಡುತ್ತೇನೆ.

ಶ್ರೀ ವೀರಕುಮಾರ್ ಪಾಟೀಲ್ : ಫಾರೆಸ್ಟ್ ಡಿಪಾರ್ಟ್‌ಮೆಂಟಿನಲ್ಲಿ ಈ ಭೂಮಿಗೋಸ್ಕರ ಇನ್ನೂ ಕ್ರಿಯರೆನ್ಸ್ ಸಿಕ್ಕಿಲ್ಲ. ಈ ಕ್ಲಿಯರನ್ಸ್ ಸಿಗಬಹುದು. ಮತ್ತು ಈ ಕೆಲಸದ ಸಲುವಾಗಿ 20 ಕಿಲೋಮೀಟರ್ ಡಿಸ್ಟೆನ್ಸ್‌ನಲ್ಲಿ 66.ಕೆ.ವಿ. ಟ್ರಾನ್ಸ್‌ಮಿಷನ್ ಲೈನ್ ಅರಕಲಗೂಡಿನಿಂದ ಶನಿವಾರ ಸಂತೆಗೆ 150 ಲಕ್ಷ ರೂಪಾಯಿಗಳು 66 ಕೆ.ವಿ. ಸಬ್-ಸ್ಟೇಷನ್‌ಗೆ 250 ಲಕ್ಷ ರೂಪಾಯಿಗಳು, ಇಷ್ಟು ಹಣವನ್ನು ನಾವು ಮಂಜೂರ್ಮಾಡಿದ್ದೇವೆ. ಈ ಬಗ್ಗೆ ಕ್ಲಿಯೆರೆನ್ಸ್ ಸಿಕ್ಕಿದ ಕೂಡಲೇ ಕೆಲಸ ಪ್ರಾರಂಭ ಮಾಡಿ, ಬೇಗನೆ ಮುಗಿಸುತ್ತೇವೆ. ಆರ್.ಇ.ಪಿ.ನಲ್ಲಿ ಲೋನ್ ತೆಗೆದುಕೊಂಡಿದ್ದೇವೆ.

ಶ್ರೀ ಬಿ.ಬಿ. ಶಿವಪ್ಪ : ಸನ್ಮಾನ್ಯ ಅಧ್ಯಕ್ಷರೇ, ಶನಿವಾರ ಸಂತೆ ಮಾರ್ಗವಾಗಿ ಎಸಲೂರು ಪೇಟೆಗೆ ಬಂದು ನನ್ನ ಕ್ಷೇತ್ರಕ್ಕೆ ಹೋಗುತ್ತದೆ. ಇದು ಮಂಜೂರಾಗಿ ತುಂಬಾ ದಿವಸಗಳಾಯಿತು. ಜಾಗವನ್ನು ಕೂಡ ಉಚಿತವಾಗಿ ಇಲಾಖೆಗೆ ಮಾಡಿಕೊಟ್ಟಿದ್ದೇವೆ. ಆದರೆ, ಇನ್ನೂ ಕೆಲಸ ಪ್ರಾರಂಭವಾಗಿಲ್ಲ, ಅದು ಟೆಂಡರ್ ಹಂತದಲ್ಲಿ ಬಂದು ನಿಂತಿದೆ. ಒಂದು ಕಾರಣವನ್ನು ಅವರು ಕೊಡುತ್ತಾ ಇದ್ದಾರೆ. ಶನಿವಾರ ಸಂತೆ ಮಾರ್ಗವಾಗಿ ಅದು ಬರುತ್ತಾ ಇರುವುದರಿಂದ ಶನಿವಾರಸಂತೆ ಸ್ಟೇಷನ್‌ಗೆ ಇನ್ನೂ ಜಾಗ ಗುರುತಾಗದೇ ಇರುವುದರಿಂದ ಈ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತಾ ಇಲ್ಲ ಎಂದು. ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ, ಎಸಲೂರು ಪೇಟೆಯದು ಮಂಜೂರಾಗಿ ಈಗಾಗಲೇ 2-3 ವರ್ಷಗಳಾಗಿದೆ. ಅದನ್ನು ಪ್ರಾರಂಭ ಮಾಡಿದರೆ, ಶನಿವಾರಸಂತೆ ಮಾರ್ಗವಾಗಿಯೇ ಹೋಗತಕ್ಕಂತಾದ್ದು, ಅರಕಲಗೂಡಿನಿಂದ ಹೊರಟು ಶನಿವಾರ ಸಂತೆಗೆ ಬಂದು ಅದು ಎಸಲೂರು ಪೇಟೆಗೆ ಹೋಗಲೇಬೇಕು. ಶನಿವಾರಸಂತೆ ಮಾರ್ಗವಾಗಿಯೇ ಹೋಗಬೇಕು.

ಆದರೆ, ಇವರು ಎಸಲೂರು ಪೇಟೆಗೆ ಕೆಲಸ ಪ್ರಾರಂಭ ಮಾಡಬಹುದು. ಅಷ್ಟರೊಳಗೆ ಶನಿವಾರ ಸಂತೆಗೆ ಜಾಗ ಮಂಜೂರಾದಾಗ ಆ ಕೆಲಸ ಅಲ್ಲಿ ಪ್ರಾರಂಭ ಮಾಡುವುದಕ್ಕೆ ಅವಕಾಶವಾಗುತ್ತದೆ. ಅದಕ್ಕೋಸ್ಕರ ಇದನ್ನು ನಿಲ್ಲಿಸಿದ್ದೀರಿ ಏಕೆ? ಹಿಂದೆ ಎಸಲೂರು ಪೇಟೆಗೆ ಮಂಜೂರಾಗಿತ್ತು. ಕೆಲವು ಕಾಫಿ ಪ್ಲಾಂಟರುಗಳು ತೊಂದರೆ ಮಾಡಿದರು ಎಂದು ಅದನ್ನು ನಿಲ್ಲಿಸಿ, ಇವತ್ತು ಅರಕಲಗೂಡಿನಿಂದ, ಎಸಲೂರು ಪೇಟೆಗೆ ತೆಗೆದುಕೊಂಡರು. ಅದರ ಮಧ್ಯೆ ಶನಿವಾರಸಂತೆ ಬಂದಿದ್ದರಿಂದ, ಮತ್ತು ಜಾಗ ಸಿಗಲಿಲ್ಲವೆಂಬ ಕಾರಣದಿಂದ ಎಸಲೂರು ಪೇಟೆಯ ಕೆಲಸವನ್ನು ವಿಳಂಬ ಮಾಡುತ್ತಿದ್ದಾರೆ. ಆಡಳಿತಾತ್ಮಕ ಮಂಜೂರಾತಿ ಸಿಕ್ಕಿದೆ, ಟೆಂಡರ್ ಹಂತಕ್ಕೆ ಬಂದು, ಟೆಂಡರ್ ಕರೆಯಲು ಇದೊಂದು ತೊಂದರೆ ಮಾಡಿಕೊಂಡು ನಿಲ್ಲಿಸಿದ್ದಾರೆ. ಆದ್ದರಿಂದ, ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ. ದಯಮಾಡಿ, ಈಗೇನು ಮಂಜೂರಾಗಿದೆ ಎಸಲೂರು ಪೇಟೆಗೆ ಮತ್ತು ಟೆಂಡರ್ ಹಂತದಲ್ಲಿ ಏನು ನಿಂತಿದೆ, ಆ ಕೆಲಸ ಪ್ರಾರಂಭ ಮಾಡಲಿಕ್ಕೆ ಅನುಮತಿ ಕೊಡಿಸಿ.

ಶ್ರೀ ವೀರಕುಮಾರ್ ಪಾಟೀಲ್ : ಈ ಕೆಲಸ ಮಂಜೂರಾಗಿ ಎರಡು ವರ್ಷಗಳಾಗಿರುವುದು ನಿಜ. ಕೆಲವೊಂದು ತಾಂತ್ರಿಕ ಸಮಸ್ಯೆಗಳಿಂದ ಕೆಲಸ ನಿಂತಿದೆ. ನಾವು ತಾಂತ್ರಿಕ ಸಮಸ್ಯೆಗಳನ್ನು ನಿವಾರಿಸಿಕೊಂಡು ಕೆಲಸವನ್ನು ಏಕ ಕಾಲದಲ್ಲಿ ಮಾಡುತ್ತೇವೆ ಮತ್ತು ಕೆಲಸವನ್ನು ಬೇಗನೆ ಮುಗಿಸುತ್ತೇವೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಇಲ್ಲಿ ಇದಕ್ಕಾಗಿ ಜಾಗವನ್ನು ಪಡೆದುಕೊಳ್ಳಲು ಈಗಾಗಲೇ ಒಂದು ವರ್ಷವಾಗಿದೆ. ಇನ್ನು ಕೆಲಸ ಮಾಡಲು ಇನ್ನೂ ಒಂದು ವರ್ಷ ಬೇಕಾಗುತ್ತದೆಯೇ?

ಶ್ರೀ ವೀರಕುಮಾರ್ ಪಾಟೀಲ್ : ಈ ಬಗ್ಗೆ ಕ್ಲಿಯರೆನ್ಸ್ ಬಂದಕೂಡಲೇ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

## ರಾಜ್ಯದಲ್ಲಿರುವ ಕೆರೆಗಳಲ್ಲಿ ಹೂಳೆತ್ತುವುದರಲ್ಲಿ ವಿಳಂಬ

460 - ಶ್ರೀ ರವೀಂದ್ರನಾಥ್ ಎಸ್.ಎ (ಮಾಯಕೊಂಡ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಿಶ್ವಬ್ಯಾಂಕಿನ ನೆರವಿನ ವಿಳಂಬದಿಂದಾಗಿ ರಾಜ್ಯದ ಕೆರೆಗಳ ಹೂಳೆತ್ತುವ ಸರ್ಕಾರದ ಉದ್ದೇಶಿತ ಕಾರ್ಯಕ್ರಮ ಮುಂದೂಡಲ್ಪಡುವ ಸಾಧ್ಯತೆ ಇದೆಯೇ? ಇದ್ದಲ್ಲಿ ವಿವರ ನೀಡುವುದು?*

ಆ) *ವಿಶ್ವಬ್ಯಾಂಕಿನ ಬಿಡುಗಡೆಗೆ ವಿಳಂಬವಾಗಿರುವ ಹಣ ಎಷ್ಟು? ವಿಳಂಬವಾಗಲು ನೀಡಿರುವ ಕಾರಣ ಏನು?*

ಇ) *ಸರ್ಕಾರ ವಿಶ್ವಬ್ಯಾಂಕಿನಿಂದ ಹಣವನ್ನು ಪಡೆದು ಈ ಹೂಳೆತ್ತುವ ಕಾರ್ಯಕ್ರಮವನ್ನು ಹಮ್ಮಿಕೊಂಡು ಪೂರ್ಣಗೊಳಿಸುವುದು ಯಾವಾಗ?*

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಆ) ಮತ್ತು ಇ) ಸರ್ಕಾರದ ಉದ್ದೇಶಿತ ಕೆರೆಗಳ ಅಭಿವೃದ್ಧಿ ಯೋಜನೆಗಾಗಿ ರಾಜ್ಯ ಸರ್ಕಾರವು 946.47 ಕೋಟಿ ರೂ.ಗಳ ಪ್ರಸ್ತಾವನೆಯನ್ನು ಭಾರತ ಸರ್ಕಾರಕ್ಕೆ ಸಲ್ಲಿಸಲಾಗಿದ್ದು ವಿಶ್ವಬ್ಯಾಂಕಿಗೆ ಶಿಫಾರಸ್ಸು ಮಾಡಲು ಕೋರಿದೆ. ಪ್ರಸ್ತಾವನೆಯು ವಿಶ್ವಬ್ಯಾಂಕಿನಲ್ಲಿ ತೀರ್ಪಿಗಾಗಿ ಉಪಸ್ಥಿತಿಯಲ್ಲಿರುವ ಕಾರಣ ವಿಶ್ವಬ್ಯಾಂಕಿನ ಹಣ ಬಿಡುಗಡೆಗೆ ಯಾವುದೇ ವಿಳಂಬವಾಗುವುದಿಲ್ಲ. ಭಾರತ ಸರ್ಕಾರದ ಹಣಕಾಸು ವ್ಯವಹಾರ ಇಲಾಖೆಯು ರಾಜ್ಯದ ಪ್ರಸ್ತಾವನೆಯನ್ನು ಪರಿಶೀಲಿಸಿ ದಿನಾಂಕ 5-10-2000 ರಂದು ವಿಶ್ವಬ್ಯಾಂಕಿಗೆ ಅನುಮೋದನೆ ನೀಡಲು ಶಿಫಾರಸ್ಸು ಮಾಡಿರುತ್ತದೆ. ವಿಶ್ವಬ್ಯಾಂಕಿನಿಂದ ಹಣದ ನೆರವು ಪಡೆಯುವ ಯೋಜನೆಯು 2001 ರ ಜೂನ್ ಅಥವಾ ಜುಲೈ ತಿಂಗಳಲ್ಲಿ ಪೂರ್ಣಗೊಳ್ಳುವ ಸಾಧ್ಯತೆ ಇರುವುದರಿಂದ ಈ ಕಾರ್ಯಕ್ರಮವನ್ನು ಜುಲೈ 2001 ರಿಂದ ಪ್ರಾರಂಭಿಸಲಾಗುವುದು.

ಶ್ರೀ ಎಸ್.ಎ. ರವೀಂದ್ರನಾಥ್ : ಮಾನ್ಯ ಅಧ್ಯಕ್ಷರೆ, ನಾನು ಮೂರು ಪ್ರಶ್ನೆಗಳನ್ನು ಕೇಳಿದ್ದೆ, ಆದರೆ ಇವರು ಚರಿತ್ರೆ ಬರೆದಂತೆ ಉತ್ತರವನ್ನು ಕೊಟ್ಟಿದ್ದಾರೆ. ಯಾವ ಪ್ರಶ್ನೆಗೆ ಉತ್ತರ ಯಾವುದು ಎಂದು ನನಗೆ ಗೊತ್ತಾಗುತ್ತಿಲ್ಲ. ದಯಮಾಡಿ ಯಾವ ಪ್ರಶ್ನೆಗೆ ಯಾವ ಉತ್ತರ ಎಂಬುದನ್ನು ಹೇಳಬೇಕು.